# ಹರಿದಾಸ ಸಾಹಿತ್ಯದಲ್ಲಿ ಮೌಲ್ಯಗಳ ಅನಾವರಣ

**ಡಾ.ಹೆಚ್.ಮಲ್ಲಿಕಾರ್ಜುನ**
**ಮುಖ್ಯಸ್ಥರು**
**ಕನ್ನಡ ಅಧ್ಯಯನ ವಿಭಾಗ**
**ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮೋಕ.**

ಹರಿದಾಸ ಸಾಹಿತ್ಯವು ಕನ್ನಡ ಸಂಸ್ಕೃತಿ ಪರಂಪರೆಯ ಮಹತ್ವಪೂರ್ಣ ಭಾಗವಾಗಿದೆ. ಕರ್ನಾಟಕ ಸಾಹಿತ್ಯ, ಸಂಗೀತ, ಸಂಸ್ಕೃತಿಗಳನ್ನು ಪ್ರಭಾವ ಪೂರ್ಣವಾಗಿ ಸಮೃದ್ಧಗೊಳಿಸಿದ ಸಾಹಿತ್ಯವೆಂದರೆ ಹರಿದಾಸ ಸಾಹಿತ್ಯ. ಸಾಹಿತ್ಯದ ಮೌಲ್ಯವನ್ನು ಅಭಿವೃದ್ಧಿಗೊಳಿಸಿ ಅಭಿವ್ಯಕ್ತಿಸಿದ ಪ್ರಕಾರವೇ ಹರಿದಾಸರ ಕೊಡುಗೆ. ಶ್ರೀಪಾದರಾಜರು, ವ್ಯಾಸರಾಜರು, ಪುರಂದದಾಸರು, ಮತ್ತಿತರರು, ಭಾಗವಾತಾದಿ ಗ್ರಂಥಗಳ ಸಾರವನ್ನು ಹಿಡಿದು ತತ್ವ ಬೋಧನೆಗೆ ಅಡಿಪಾಯ ಹಾಕಿದರು. ವಿಜಯದಾಸರು, ಗೋಪಾಲದಾಸರು ಮತ್ತು ಜಗನ್ನಾಥದಾಸರು ತತ್ವ ಸುಧೆಯನ್ನು ನೇರವಾಗಿ ಉಣಬಡಿಸಿದರು. ಹೊರಗಣ್ಣಿನಿಂದ ಸತ್ಯವನ್ನು ಹುಡುಕುವವರಿಗೆ, ಹರಿದಾಸ ಸಾಹಿತ್ಯವು ವೇದಾಂತವನ್ನು ತರ್ಕದಲ್ಲಿ ತೋರಿಸಿತು. ಅಂತಹ ವೇದಾಂತವೇ ವಾದವಾಯಿತು. ಒಳಗಣ್ಣಿನಿಂದ ನೋಡು ಮೂಜಗ ಧೊರೆಯೆ ಎಂದು ಹರಿದಾಸರು ವೇದಾಂತವನ್ನು ತರ್ಕವಾಗಿರಿಸಿಕೊಂಡರು. ಇಂತಹ ತರ್ಕಕ್ಕೆ ಅನುಭವದ ಗಾನ ಸುಧೆಯ ಮೂಲಕ ಎಲ್ಲರ ಮನಮುಟ್ಟುವಂತೆ ಮಾಡಿದರು. ಶ್ರೀಪಾದರಾಜರಿಂದ ಆರಂಭವಾದ ದಾಸ ಸಾಹಿತ್ಯ ವ್ಯಾಸರಾಯರು ಮತ್ತು ವಾದಿರಾಜರಿಂದ ಮುಂದುವರೆಸಲ್ಪಟ್ಟು ಅದು ಪ್ರಜ್ವಲಿಸಿದ್ದು ಪುರಂದರದಾಸರು ಮತ್ತು ಕನಕದಾಸರ ಕೀರ್ತನೆಗಳಿಂದ.

"ಶ್ರೀಪಾದರಾಜರು ನೆಟ್ಟ ಹರಿದಾಸ ಸಾಹಿತ್ಯದ ಬೀಜ ವ್ಯಾಸರಾಯರ ಹಾರೈಕೆಯಿಂದ ಮೊಳಕೆಯೊಡೆದು ವಾದಿರಾಜರ ಕೃಪಾಕಟಾಕ್ಷದಿಂದ ಶಾಖೋಪಶಾಖೆಗಳಾಗಿ ಬೆಳೆಯುವ ವೇಳೆಗೆ ಸರಿಯಾಗಿ ಪುರಂದರದಾಸರು ಮತ್ತು ಕನಕದಾಸರಂತಹ ಪ್ರತಿಭಾಶಾಲಿಗಳು ಪ್ರವೇಶಿಸುವುದೇ ತಡ ದಾಸ ಸಾಹಿತ್ಯದಲ್ಲಿ ಸುಗ್ಗಿಯ ಹೊಂಬೆಳಸು ತುಂಬಿ ತುಳುಕಾಡತೊಡಗಿತು." ( ಹರಿದಾಸ ಸಾಹಿತ್ಯ ಸಾರ, ಡಾ.ಜಿ.ವರದರಾಜರಾವ್ ಪು.೨೨) ಪುರಂದರದಾಸರು ಹರಿದಾಸ ಕೂಟದ ಸರ್ವಶ್ರೇಷ್ಠರು ಇವರು ಕ್ರಿ. ಶ. ಸುಮಾರು ೧೪೮೪ ರಲ್ಲಿ ಪುರಂದರಗಡ ಎಂಬಲ್ಲಿ ಜನಿಸಿದರು. ಹೆಸರು 'ಶ್ರೀನಿವಾಸನಾಯಕ'. ಇವರು ಬಾಲ್ಯದಲ್ಲಿ ವಿದ್ಯಾಭ್ಯಾಸವನ್ನು ಮಾಡಿ ನಂತರ ತಂದೆಯ ರತ್ನಪಡಿ ವ್ಯಾಪಾರ ವೃತ್ತಿಯನ್ನು ಮುಂದುವರೆಸುತ್ತಿದ್ದರು. ಒಂದು ದಿನ ಭಗವಂತನು ಬ್ರಾಹ್ಮಣ ವೇಷಧಾರಿಯಾಗಿ ಬಂದು ದೇಶಾವರವನ್ನು ನೀಡಬೇಕೆಂದು ಬೇಡಿದನು. ಆಗ ಅವನ ಹೆಂಡತಿಯು ಔದಾರ್ಯದಿಂದ ಆ ಬ್ರಾಹ್ಮಣನಿಗೆ ದೇಶಾವರವನ್ನು ನೀಡಿ ಗಂಡನ ಕಣ್ತೆರೆಸಿದಳು. ನಂತರ ವಸ್ತುಸ್ಥಿತಿಯನ್ನು ತಿಳಿದ 'ಶ್ರೀನಿವಾಸನಾಯಕರಿಗೆ ಹೆಂಡತಿಯ ಔದಾರ್ಯ ಮತ್ತು ಭಗವಂತನ ಲೀಲೆಯು ಅರಿವಾಗಿ ವೈರಾಗ್ಯ ಹುಟ್ಟಿ, ಸಕಲವನ್ನು ಬ್ರಾಹ್ಮಣರಿಗೆ ದಾನಮಾಡಿ ವಿಜಯನಗರಕ್ಕೆ ಬಂದು ವ್ಯಾಸರಾಯರ ಶಿಷ್ಯರಾದರು. ರತ್ನಪಡಿ ವ್ಯಾಪಾರಿಯಾಗಿದ್ದ 'ಶ್ರೀನಿವಾಸನಾಯಕರು ವ್ಯಾಸರಾಯರಿಂದ 'ಪುರಂದರದಾಸ' ಎಂದು ಕರೆಸಿಕೊಂಡರು. ಅವರಿಂದಲೇ 'ಪುರಂದರವಿಠ್ಠಲ' ಅಂಕಿತವನ್ನು ಪಡೆದರು. 'ಪುರಂದರದಾಸರು ಗುರು ಹಿರಿಯರು ಹಾಕಿಕೊಟ್ಟ ಮಾರ್ಗದಲ್ಲಿಯೇ ಸಾಗಿ ತಮ್ಮ ಭಕ್ತಿ ಭಾವಗಳಿಂದ ಉತ್ಕೃಷ್ಟವಾದ ಸಾಹಿತ್ಯವನ್ನು ರಚಿಸುವುದರ ಮೂಲಕ ದಾಸಸಾಹಿತ್ಯಕ್ಕೆ ಕಳಶಪ್ರಾಯರಾದರು. "ಪುರಂದರವಿಠ್ಠಲ ಅಂಕಿತದಲ್ಲಿ ಹರಿಭಕ್ತಿಯನ್ನು ಒಳಗೊಂಡ ಕೀರ್ತನೆ ಉಗಾಭೋಗಗಳನ್ನು ರಚಿಸಿ ದಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಮದ್ವಮತದ ತತ್ವಸಾರವನ್ನು ಮಾತ್ರವಲ್ಲದೇ

ವೇದ, ಉಪನಿಷತ್ತು, ರಾಮಾಯಣ, ಮಹಾಭಾರತ, ಶ್ರೀಮದ್ಭಾಗವತದ ಸಾರವನ್ನೆಲ್ಲಾ ಜನರಿಗೆ ತಿಳಿಸುವ ಸಲುವಾಗಿ ಸರಳ ಭಾಷೆಯಲ್ಲಿ ಕಾವ್ಯ ರಚನೆ ಮಾಡಿದರು. ಹರಿನಾಮ ಮಹಿಮೆ, ಹರಿಗುರುಗಳ ಸ್ಮರಣೆ, ಅಂತರಂಗವೇದನೆ. ಕೃಷ್ಣಲೀಲೆ, ಸಮಾಜ ವಿಮರ್ಶೆ, ಸಮಾಜ ಬೋಧನೆ ಇವು ಇವರ ಸಾಹಿತ್ಯದಲ್ಲಿ ಕಂಡು ಬರುವ ಪ್ರಮುಖವಾದ ವಸ್ತುಗಳು. ಅವರ ಕೈಂಕರ್ಯವನ್ನು ಕಂಡ ವ್ಯಾಸರಾಯರು ಅವರನ್ನು 'ದಾಸರೆಂದರೇ ಪುರಂದರದಾಸರಯ್ಯ' ಎಂದು ಹೊಗಳಿದರು. ಅವರು ರಚಿಸಿದ ಸಾಹಿತ್ಯವನ್ನು 'ಪುರಂದರೋಪನಿಷತ್ತು' ಎಂದು ಗೌರವಿಸಿದರು. ಇವರು ಸಂಗೀತ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ, ಇವರು ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯಷ್ಟೇ ಮಹತ್ವದ್ದು. ಇವರು ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲೇ ಒಂದು ಸೂಕ್ಷ್ಮವಾದ ನೆಲೆಗಟ್ಟನ್ನು ನಿರ್ಮಿಸುವುದರ ಮೂಲಕ 'ಕರ್ನಾಟಕ ಸಂಗೀತ ಪಿತಾಮಹ' ಎಂದು ಕರೆಸಿಕೊಂಡರು. ತಮ್ಮ ಸಾಹಿತ್ಯಕ್ಕೆ ಸಂಗೀತದ ಸ್ವರ್ಗವನ್ನು ನೀಡುವುದರ ಮೂಲಕ ಜನಸಾಮಾನ್ಯರನ್ನು ಶೀಘ್ರವಾಗಿ ತಲುಪಿದರು. ಇವರ

ರಚನೆ, ಧರ್ಮ, ಸಾಹಿತ್ಯ, ಸಂಗೀತ ಈ ಮೂರರ ತ್ರಿವೇಣಿ ಸಂಗಮವೇನಿಸಿತ್ತು. ಒಟ್ಟಾರೆ ಮತ್ತು ಪುರಂದರದಾಸರು ದಾಸ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆ ಸರ್ವಶ್ರೇಷ್ಠವಾದದು. ಮಾರ್ಗದರ್ಶಿಯವಾದುದು ಮತ್ತು ಕಳಶಪ್ರಾಯವಾದುದು ಎಂದರೆ ಉತ್ಪ್ರೇಕ್ಷೆಯಾಗಲಾರದು. ಭಕ್ತಿ ಪರವಶರಾಗಿ ಭಕ್ತಿಯುತ ಮೌಲ್ಯವನ್ನು ಸಾರುವ ಹಲವಾರು ಕೀರ್ತನೆಗಳನ್ನು ಪುರಂದರದಾಸರು ಹಾಡಿದರು. ಶ್ರೀಕೃಷ್ಣನ ಕುರಿತು ಹಲವು ಕೀರ್ತನೆಗಳನ್ನ ಭಾವಪರವಶರಾಗಿ ಹಾಡಿ ಹೊಗಳಿದ್ದಾರೆ. “ಆಡಿದನೋ ರಂಗ ಅದ್ಭುತದಿಂದಲಿ ಕಾಳಿಂಗನ ಫಣಿಯಲಿ ಪಾಡಿದವರಿಗೆ ಬೇಡಿದ ವರಗಳ ನೀಡುತಲಿ ದಯ ಮಾಡುತಲಿ ನಲಿದಾಡುತಲಿ ಬೆಣ್ಣೆ ಬೇಡುತಲಿ ಕೃಷ್ಣ” ಎಂದು ಹಾಡಿದ್ದಾರೆ. ಅಂದರೆ ಶ್ರೀಕೃಷ್ಣ ಪರಮಾತ್ಮ ಕಷ್ಟಗಳನ್ನು ನಿವಾರಿಸುವ ಹಾಗೂ ಬೇಡಿದ ವರಗಳ ನೀಡುವ ಭಕ್ತರ ಸದಾಕಾಲ ಕಾಯುವ ದೊರೆ. ಕಷ್ಟದಲ್ಲಿದ್ದ ಜನರನ್ನು ಕಾಳಿಂಗ ಸರ್ಪದಿಂದ ರಕ್ಷಿಸಿ ಅದರ ಮೇಲೆ ಆಡಿದ ಮಹಾನ್ ಚೇತನ ಎಂದು ಹಾಡಿ ಹೊಗಳಿದ್ದಾರೆ. ಹಾಗೇಯೇ ಅವರ ಇನ್ನೊಂದು ಕೀರ್ತನೆಯಲಿ, “ ಎನಗೂ ಆಣೆ ರಂಗ ನಿನಗೂ ಆಣೆ ಎನಗೂ ನಿನಗೂ ಇಬ್ಬರಿಗೂ ಭಕ್ತರಾಣೆ ನಿನ್ನ ಬಿಟ್ಟು ಅನ್ಯರ ಭಜಿಸಿದರೆನಗೆ ಆಣೆ ರಂಗ ಎನ್ನ ನೀ ಕೈ ಬಿಟ್ಟು ಪೊದರೆ ನಿನಗೆ ಆಣೆ. ಎಂದಿದ್ದಾರೆ ಶ್ರೀರಂಗನನ್ನ ನೆನೆಯುತ್ತಾ ನಾನು ನಿನ್ನನ್ನು ಬಿಟ್ಟು ಯಾರನ್ನೂ ಪೂಜಿಸಲ್ಲಾ, ನಾನೇನಾದರೂ ನಿನ್ನನ್ನ ತೊರೆದರೆ ಅದೇ ಕೊನೆ. ನಿನ್ನ ಬಿಟ್ಟು ಬೇರೆಯಾರನ್ನೂ ಭಜಿಸದೇ ನಿನ್ನನೇ ಭಜಿಸುವೆನು ಹಾಗೇನಾದರು ನೀನು ನನ್ನನ್ನ ಬಿಟ್ಟು ಹೋದರೆ ನಿನ್ನ ಮೇಲಾಣೆ ಎಂದು ಹೇಳಿ ಹಾಡಿದ್ದಾರೆ. ಸಾಮಾಜಿಕ ಮೌಲ್ಯ ಸಾರುವ ಕೀರ್ತನೆಗಳಲ್ಲಿ, ಈಸಬೇಕು ಇದ್ದು ಜಯಿಸಬೇಕು. ಹೇಸಿಗೆ ಸಂಸಾರದಲ್ಲಿ ಆಸೆ ಲೇಶ ಇಡದ ಹಾಗೆ ಮೋಸ ಹೋಗದ ಹಾಗೇ ಜಗದೀಶ ಪುರಂದರವಿಠಲನ ನೆನೆದು ಈ ಜೀವನದಲ್ಲಿ ಸ್ವಲ್ಪವೂ ಆಸೆಯನ್ನು ಇಟ್ಟುಕೊಳ್ಳದ ಹಾಗೆ ಬದುಕನ್ನು ಸಾಗಿಸಬೇಕು. ಅಂತರಂಗ ಬಹಿರಂಗ ಒಂದಾಗಿರಬೇಕು. ಮನದಲ್ಲಿ ಒಂದು ಯೋಚನೆ ಕೇಳುಗರ ಮುಂದೆ ಒಂದು ರೀತಿ ಮಾತಾಡಬಾರದು. ನಿಸ್ವಾರ್ಥ ಆಲೋಚನೆ ವೈಚಾರಿಕವಿಚಾರ ಆಡಂಬರದ ಬದುಕಿಗಿಂತ ವಿಠಲನ ನೆನೆವ ಬದುಕೆ ಶ್ರೇಷ್ಠ ಎಲ್ಲಾ ಆಸೆಗಳನ್ನು ತೊರೆದು ದೇವರನ್ನು ನೆನೆಯಬೇಕು ಎಂದು ಈ ಕೀರ್ತನೆಯಲ್ಲಿ ತಿಳಿಸಿದ್ದಾರೆ. “ಸ್ನಾನವಮಾಡಿರೋ ಜ್ಞಾನ ತೀರ್ಥದಲ್ಲಿ ನಾನು ನೀನೇಂಬ ಹಂಕಾರವ ಬಿಟ್ಟು” ಎಂದು ಹಾಡಿದ್ದಾರೆ ದಾಸವರೇಣ್ಯರು ಬಾಹ್ಯ ಶುದ್ಧಿಗಿಂತ ಆಂತರಿಕ ಶುದ್ಧಿಗೆ ಮಹತ್ವ ನೀಡಿದ್ದರು. ತಮ್ಮ ಹಲವಾರು ಕೀರ್ತನೆಗಳಲ್ಲಿ ಅಂತರಂಗ ಶುದ್ಧಿಗೆ ಒತ್ತು ನೀಡಿ ಅದನ್ನೇ ಜೀವನ ಪೂರ್ತಿ ಪ್ರತಿಪಾದಿಸಿದರು. ಮನುಷ್ಯನಲ್ಲಿ ನಾನು – ನೀನು ಎಂಬ ಏಕವಚನದ ಗರ್ವವನ್ನು ತೊರೆದಾಗ ಜ್ಞಾನವೆಂಬ ತೀರ್ಥವನ್ನುಂಡು ಸುಜ್ಞಾನವೆಂಬ ಸಮುದ್ರದಲ್ಲಿ ಮಿಂದು ಪವಿತ್ರನಾಗು ಎಂದಿದ್ದಾರೆ. ಕನಕದಾಸರು ಪುರಂದರದಾಸರ ಸಮಕಾಲೀನರಾದ ಇವರು ಸಹ ವ್ಯಾಸರಾಯರ ಶಿಷ್ಯರು. ೧೫೦೮ರಲ್ಲಿ ಧಾರವಾಡ ಜಿಲ್ಲೆಯ ಬಾಡ ಗ್ರಾಮದಲ್ಲಿ ಜನಿಸಿದರು. ಅನೇಕ ವರ್ಷ ಮಕ್ಕಳಾಗದಿದ್ದ ದಂಪತಿಗಳಿಗೆ ತಿರುಪತಿ ಶ್ರೀನಿವಾಸನ ದಯದಿಂದ ಇವರು ಜನಿಸಿದರು. ಇದರಿಂದ ಆ ದಂಪತಿಗಳು ಮಗುವಿಗೆ ‘ತಿಮ್ಮಪ್ಪ’ ಎಂದೆ ನಾಮಕರಣ ಮಾಡಿದರು. ತಿಮ್ಮಪ್ಪನ ತಂದೆ ಪಾಳೆಗಾರನಾಗಿದ್ದರಿಂದ ತಂದೆಯಂತೆಯೆ ಧೈರ್ಯ, ಶೌರ್ಯಗಳಿಂದ ಹೆಸರುವಾಸಿಯಾಗಿದ್ದರು. ತಂದೆಯ ಮರಣದ ನಂತರ ಇವನು ತಂದೆಯ ಪಾಳೆಗಾರಿಕೆಯನ್ನು ಮುಂದುವರೆಸಿದನು. ಒಂದು ದಿನ ತಿಮ್ಮಪ್ಪನಿಗೆ ಕೊಪ್ಪರಿಗೆಯಲ್ಲಿ ಹಣ ಲಭಿಸಲು ಅದನ್ನು ತನ್ನ ಊರಿನ ಕೇಶವ ದೇವಾಲಯದ ಜೀರ್ಣೋದ್ಧಾರಕ್ಕೆ ಬಳಸಿ ಜನರ ಪ್ರೀತಿ ಅಭಿಮಾನವನ್ನು ಸಂಪಾದಿಸಿದನು. ಒಂದು ದಿನ ತಿರುಪತಿ ತಿಮ್ಮಪ್ಪನು ಕನಸಿನಲ್ಲಿ ಬಂದು ತನ್ನ ಸೇವೆಗಾಗಿ ಸಂಕಲ್ಪ ಮಾಡುವಂತೆ ಸೂಚಿಸಿದನಂತೆ ಆದರೆ ತಿಮ್ಮಪ್ಪ ಅದನ್ನು ಅಷ್ಟಾಗಿ ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಮುಂದೆ ತಿಮ್ಮಪ್ಪನಿಗೆ ಯಾವುದೋ ಒಂದು ಯುದ್ಧದಲ್ಲಿ ಸೋಲುಂಟಾಗಿ ಗಾಸಿಯಾಗಿ ಬಿದ್ದಿದ್ದಾಗ ತನ್ನನ್ನು ದೇವರು ಬಂದು ಸಂತೈಸಿದ ಅನುಭವವಾಯಿತು. ಅಂದಿನಿಂದ ಅವನ ಮನಸ್ಸು ಆಧ್ಯಾತ್ಮಿಕತೆಗೆ ಸೋತು, ನಂತರ ಅವನು ಎಲ್ಲವನ್ನು ತೊರೆದು ವಿರಕ್ತಿ ಹೊಂದಿ ವಿಜಯನಗರಕ್ಕೆ ಬಂದು ವ್ಯಾಸರಾಯರ ಶಿಷ್ಯರಾದರು. ದಾಸಸಾಹಿತ್ಯಕ್ಕೆ ಕನಕದಾಸರ ಸೇವೆ ಮಹತ್ವಪೂರ್ಣವಾದುದು ಇವರ ‘ಬಾಡದಾದಿ ಕೇಶವ’, ‘ಕಾಗಿನೆಲೆಯಾದಿಕೇಶವ’ ಅಂಕಿತದಲ್ಲಿ ರಚನೆಗೊಂಡಿದ್ದು, ಕೀರ್ತನೆಗಳನ್ನು ಮಾತ್ರವಲ್ಲದೇ ಕಾವ್ಯ ರಚನೆಯಲ್ಲಿ ತೊಡಗುವುದರ ಮೂಲಕ ದಾಸಸಾಹಿತ್ಯದಲ್ಲಿ ವೈಶಿಷ್ಟತೆಯನ್ನು ಮೆರೆದಿದ್ದಾರೆ. ಇವರ ಹರಿಭಕ್ತಸಾರ, ಹರಿನಾಮಸ್ತುತಿ, ನಳಚರಿತೆ, ಮೋಹನತರಂಗಿಣಿ, ರಾಮಧ್ಯಾನಚರಿತೆ ಇವು ಇವರ ಕಾವ್ಯಗಳಾಗಿದ್ದು ಇವುಗಳಲ್ಲೂ ಹರಿಮಹಿಮೆ, ವಿಷ್ಣುಭಕ್ತಿ ಬೆಳಗಿರುವುದನ್ನು ಕಾಣಬಹುದಾಗಿದೆ. ಹೀಗೆ ದಾಸಸಾಹಿತ್ಯದ ಸಂಪ್ರದಾಯವನ್ನು ಮುರಿದು ಕಾವ್ಯರಚನೆಯನ್ನು ತೊಡಗಿದ ಕನಕದಾಸರ ಸೇವೆ ವೈಶಿಷ್ಟ್ಯಪೂರ್ಣವಾದುದಾಗಿದೆ. ಕನಕದಾಸರು ಆದಿನೆಲೆಯಾದಿಕೇಶವನನ್ನು ಭಕ್ತಿಪೂರ್ವಕವಾಗಿ ಸ್ಮರಿಸುತ್ತಾ

“ಈಶ ನಿನ್ನ ಚರಣ ಭಜನೆ ಆಶೆಯಿಂದ ಮಾಡುವೆನು ದೋಷ ನಾಶ ಮಾಡು ಶ್ರೀ ಕೇಶವ ಮರೆತು ಬಿಡದೆ ಹರಿಯನಾಮ ಬರೆದು ಓದಿ ಕೇಳುವರಿಗೆ ಕರೆದು ಮುಕ್ತಿ ಕೊಡುವ ಬಾಡದಾದಿಕೇಶವ ಶ್ರಿಹರಿಯ ಇಪ್ಪತ್ನಾಲ್ಕು ನಾಮಗಳನ್ನು ಕುರಿತಂತೆ ರಚಿತವಾಗಿರುವ ಈ ಕೀರ್ತನೆ ತನ್ನ

ಸರಳತೆಯಿಂದ ಸಹಜತೆಯಿಂದ ಓದುಗರ ಕೇಳುಗರ, ಕಣ್ಣು, ಕಿವಿ, ಮನಗಳನ್ನು ಸೂಜಿಗಲ್ಲಂತೆ ಸೆಳೆದುಕೊಂಡು ಬರುತ್ತದೆ. ಕನಕದಾಸರ ಶುದ್ಧಾಂತಃಕರಣದಿಂದ ನಿರಾಭರಣ ಸುಂದರವಾಗಿ ಹೊರಹೊಮ್ಮಿರುವ, ಅನನ್ಯ ಆರ್ದ್ರಭಕ್ತಿ ಜಿನುಗುತ್ತಿರುವ ಈ ಭಕ್ತಿ ಮೌಲ್ಯದ ಪ್ರಾರ್ಥನಾ ಕೀರ್ತನೆಯನ್ನು ನಿತ್ಯ ಪಾರಾಯಣ ಮಾಡುವ ಪಂಡಿತ ಪಾಮರರ ಹೃದಯಗಳಲ್ಲೂ ಆರ್ದ್ರಭಕ್ತಿ ಜಿನುಗದಿರದು; ತುಂಬಿ ತೊಟ್ಟಿಕ್ಕದಿರದು ಎಂದಿದ್ದಾರೆ. "ನಿನ್ನ ನೋಡಿ ಧನ್ಯನಾದೆನು ಹರಿ ಶ್ರೀನಿವಾಸ ನಿನ್ನ ನೋಡಿ ಧನ್ಯನಾದೆ ಎನ್ನ ಮನಸು ನಯನ ಸುಪ್ರಸನ್ನವಾಯಿತು ದಯಮಾಡಿ ಮುನ್ನ ಸಲಹಬೇಕು ಸ್ವಾಮಿ ಶ್ರೀನಿವಾಸನೇ ನಿನ್ನ ನೋಡಿದ ನನ್ನ ನಯನಗಳು ಧನ್ಯವಾದವು ಈ ಜನ್ಮ ಸಾರ್ಥಕವಾಯಿತು ನನ್ನ ಮನಸ್ಸು, ಕಣ್ಣುಗಳು ನಿನ್ನನ್ನು ನೋಡಿ ಸುಪ್ರಸನ್ನವಾಯಿತು. ಎಲ್ಲರನ್ನು ಕಾಪಾಡುವ ಶ್ರೀಹರಿ ನೀನು ನಮ್ಮನ್ನು ಸಲಹುವ ವ್ಯಕ್ತಿ ನೀನೇ ಎಂದು ಕೇಳಿಕೊಂಡಿದ್ದಾರೆ. ಸಾಮಾಜಿಕ ಮೌಲ್ಯಗಳನ್ನು ಸಾರುವ ಹಲವಾರು ಕೀರ್ತನೆಗಳನ್ನು ಕನಕದಾಸರು ತಿಳಿ ಹೇಳಿದ್ದಾರೆ. ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ ನಿತ್ಯಜ್ಞಾನಿಯಾದ ಮೇಲೆ ಚಿಂತೆಯಾತಕೆ ಸುಸಂಸ್ಕೃತ ಮಾನವನ ನೀತಿ ನಿಯಮಗಳನ್ನು ತುಂಬಾ ಮಾರ್ಮಿಕವಾಗಿ ಒಲ್ಲದ್ದನ್ನು ಅಲ್ಲಗಳೆಯುತ್ತಾ, ಸಗಣಿಯವನ ಜೊತೆ ಸರಸ ಆಡೋದ್ಕಿಂತ ಗಂಧದವನ ಜೊತೆ ಗುದ್ದಾಡೋದು ಲೇಸು ಎಂಬ ಜನಪದ ಗಾದೆಯ ಆಶಯವನ್ನು ಇದು ಒಳಗೊಂಡಿದೆ. ಅವರು ನೀಡುವ ದೃಷ್ಟಾಂತಗಳು ಆಳವಾದ ಜೀವನಾನುಭವದಿಂದ ಭಾಗಿ ತೂಗುತ್ತಿರುವ ಹಣ್ಣು ಹಂಪಲುಗಳು ಎಂದು ತಿಳಿ ಹೇಳಿದ್ದಾರೆ. ಗೋಪಾಲದಾಸರು ವಿಜಯದಾಸರ ಶಿಷ್ಯರು, ಗೋಪಾಲ ವಿಠ್ಠಲ ಇವರ ಅಂಕಿತ. ಇವರ ಪೂರ್ವಾಶ್ರಮದ ಹೆಸರು ಭಾಗಣ್ಣ, ಇವರ ಜನನ ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಮೊಸರುಕಲ್ಲಿನಲ್ಲಿ (೧೭೨೨). ಬಡತನದ ಬೇಗುದಿಯಲ್ಲಿ ನೊಂದ ಇವರು ತಮ್ಮ ಬದುಕನ್ನು ಹರಿಭಕ್ತಿಗೆ ಮುಡುಪಾಗಿರಿಸಿ 'ಭಕ್ತಿಯಲಿ ಭಾಗಣ್ಣ' ಎಂದೆ ಜನಪ್ರಿಯರಾಗಿದ್ದರು. ದಾಸಚತುಷ್ಟಯರೆಂದು ಖ್ಯಾತರಾದ ಪುರಂದರದಾಸ, ಜಗನ್ನಾಥ, ವಿಜಯದಾಸರೊದಿಗೆ ಇವರೂ ಒಬ್ಬರು. ಹರಿತತ್ವ ಪ್ರತಿಪಾದನೆಗೆ ಇವರ ಸುಳಾದಿಗಳು ಪ್ರಸಿದ್ಧವಾಗಿವೆ. ಸಾಂಪ್ರದಾಯಿಕ ವಿಚಾರಗಳಿಗೆ ಪ್ರತಿಭಟನೆಯನ್ನು ತೊರಿದ್ದಲ್ಲದೆ ಪ್ರಗತಿಪರ ಧೋರಣೆಗಳನ್ನು ತಮ್ಮ ಕೀರ್ತನೆಗಳಲ್ಲಿ ಇವರು ವ್ಯಕ್ತಪಡಿಸಿದ್ದಾರೆ. ಇವರು ಭಕ್ತಿಯುತವಾಗಿ ಶ್ರೀ ವಿಷ್ಣುವಿನ ಪತ್ನಿಯಾದ ಲಕ್ಷ್ಮೀದೇವಿಯನ್ನು ಸ್ತುತಿಸುತಾ ್ತ, "ಕಮಲಮುಖಿಯೆ ಕಮಲಾಲಯೆ ಕಮಲೆ ಕಮಲಾಕ್ಷಿಯೆ ಕೋಮಲೆ ಕಮಲನಾಭನ ಪಾದಕಮಲಯುಗಳ ಮಧುಪೆ ಕಮಲಜ, ಜನನಿಯೆ ಕಮಲಮಿತ್ರ ಸುಪ್ರಭೆ" ಲಕ್ಷ್ಮೀದೇವಿಯ ಸ್ತುತಿಯಿದು, ಗೋಪಾಲವಿಠಲನ ಪಟ್ಟದರಸಿಯಾದ ಲಕ್ಷ್ಮೀದೇವಿಯನ್ನು ನಖಶಿಖಾಂತವಾಗಿ ವರ್ಣಿಸಿ ಗೋಪಾಲನನ್ನು ಕಾಣುವ ತಮ್ಮ ಹಂಬಲವನ್ನು ಪೂರೈಸುವಂತೆ ಭಕ್ತಿಯುತವಾಗಿ ಪ್ರಾರ್ಥಿಸಿರುವರು. "ದಯವಿರಲಿ ದಯವಿರಲಿ ದಾಮೋದರ ಸಯವಾಗಿ ಬಿಡದಿನ್ನ ಸಾಕುವ ಶ್ರೀಕೃಷ್ಣ" ದಯವಿರಲಿ ಶ್ರೀಕೃಷ್ಣ ಏನು ಅರಿಯದ ಮೂಢರು ನಾವು ನಿನ್ನ ನಾಮದ ಭಜನೆ ಮಾಡಿದರೆ ಸಾಕು ಮುಕ್ತಿಯು ದೊರೆಯುವುದು. ಆ ದಿಸೆಯಲ್ಲಿ ನನ್ನ ನೀನು ಕೈಹಿಡಿದು ಮುನ್ನಡೆಸು ಎಂದು ಬೇಡಿಕೊಂಡಿದ್ದಾರೆ. ಹಾಗೇಯೆ ಗೋಪಾಲದಾಸರ ಕೀರ್ತನೆಗಳು ಭಕ್ತಿಸೂತ್ರದ ಪ್ರಣಾಳಿಕೆಗಳಂತಿವೆ ಅವರ ಶಿಷ್ಯರದು ಕೂಡಾ ತತ್ವಸುಧೆಯ ರಸಪ್ರವಾಹ ಬಲದಿಂದ ಜಗತ್ತನ್ನೆ ತನ್ನ ಪದತಲದಲ್ಲಿ ಮುಗಿಬೀಳಿಸಿಕೊಳ್ಳಬಲ್ಲೆ ಎಂಬ ಅಹಂಕಾರ ಸಂಪೂರ್ಣ ಕ್ಷಯವಾದ ಮೇಲೆ ವಿದ್ವದ್ವಿನಯದ ಸಾಧನೆಯಾಗಿ ಭಗವಂತನ ಸ್ಮರಣೆಧ್ಯಾನಗಳಲ್ಲಿ ಉಳಿದ ಬದುಕನ್ನು ಕಳೆಯಬೇಕೆನ್ನುವ ಕಳಕಳಿಯ ಪ್ರತಿಧ್ವನಿಯಂತಿವೆ. ಅವರ ಕೀರ್ತನೆಗಳು, "ನಾವು ವಿದ್ವಾಂಸರು, ಧನಾಢ್ಯರು, ಉತ್ತಮಕುಲದವರು, ಕರ್ಮಠರು ಎಂಬ ಅಹಂಕಾರದಿಂದ ಕೂಡಿದ ಅಜ್ಞಾನಿಗಳು, ಭಗವಂತನೇ ಸರ್ವಸ್ವವೆಂದು ನಂಬಿದ ಸತ್ಪುರುಷರಿಗೆ ದ್ರೋಹಮಾಡಿ, ಭಗವಂತನನ್ನು ಪೂಜೆಯಿಂದ ಒಲಿಸುವನೆಂದರೆ, ಅಂಥವರ ಪೂಜೆಯನ್ನು ಬಡವರ ಆಧಾರಿಯಾದ ಪರಮಾತ್ಮನು ಎಂದಿಗೂ ಸ್ವೀಕರಿಸುವುದಿಲ್ಲ" ಎಂಬ ಭಾಗವತ ವಚನವನ್ನು ಸ್ವಾನುಭವದಿಂದ ಅರ್ಥಮಾಡಿಕೊಂಡ ಹರಿದಾಸ ಸಾಹಿತ್ಯಾಸಕ್ತರು ವಿದ್ಯೆ, ವಿನಯ, ವಿವೇಕಗಳ ತ್ರಿವೇಣಿ ಸಂಗಮವಾಗಿರಬೇಕೆಂಬ ಸಂದೇಶ ನೀಡಿದರು. ವೈದಿಕ ಸಂಸ್ಕೃತಿಯ ಸಾರವನ್ನು ಪಡೆದು ಪರಂಪರೆಯ ಶ್ರೇಷ್ಠ ಮೌಲ್ಯಗಳನ್ನು ಮನಗಂಡ ಹರಿದಾಸರು ಇಡೀ ತಮ್ಮ ಬದುಕನ್ನು ಸಮಾಜದ ಒಳಿತಿಗಾಗಿ ಲೋಕಾರ್ಪಣ ಮಾಡಿಕೊಂಡರು. ಭಕ್ತಿಯಲಿ ಮಿಂದೆದ್ದು ಗೋಪಾಲದಾಸರು ಸಾಮಾಜಿಕ ಮೌಲ್ಯಗಳನ್ನು ಸಾರುವ ಕಿರ್ತನೆಗಳನ್ನು ಹಾಡಿದರು. "ಇರಬೇಕು ಸಜ್ಜನರಿಗೆ ದರ್ಜನ ಪರಿಪರಿ ಪಾಲಿಪುದು ಒಂದು ಸಮಯದಿನ್ನವರ ಭಯ ನಿವಾರಣ ರಂಗ ಗೋಪಾಲ ವಿಠ್ಠಲನಾಶ್ರಯಿಸಿ ಯಿದ್ದಂಗೆ ದುರುಳರ ಭಯವೆ ಮರುಳೆ" ಇಲ್ಲಿ ದಾಸರು ಮೇಲು ಕೀಳುಗಳ ನಡುವಿನ ಭಾವನೆಯನ್ನು ಏಕ ರೀತಿಯಿಂದ ನೋಡಿ, ಜಗತ್ತಿನಲ್ಲಿ ಯಾರು ನಿಶ್ಚಲವಾದ ಅಚಲ ನಂಬಿಕೆಯೊಂದಿಗೆ, ಶ್ರದ್ಧಾಭಕ್ತಿಯಿಂದ ಶ್ರೀಹರಿಯ ಸ್ಮರಣೆ ಮಾಡುತ್ತಾರೊ ಅವರೆ ನಿಜವಾದ ಹರಿಭಕ್ತರು ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಸಮಾನತೆಯೆ ಸಾಮಾಜಿಕ ಮೌಲ್ಯ ಎಂದು ಸಾರಿದ್ದಾರೆ. ಸಮಾಜದಲ್ಲಿ ಒಳ್ಳೆಯವರನ್ನೆ ಒರೆಗೆ ಹಚಿ ್ಚ ನೋಡಿದಾಗ ಇನ್ನೂ ಅವರು ಪ್ರಕಾಶಮಾನವಾಗಿ ಕಾಣಲು ಸಾಧ್ಯ. ಎಷ್ಟು ಮಮತೆಯೊ ನಿನಗೆ ಭ್ರಷ್ಟಮನವೆ ಕಷ್ಟದೇಹವ ನೆಚ್ಚಿ ಇವನೆ ಕಳೆದಿ ಸತಿಸುತರು ಇತರ ಜನ ಹಿತವಾದ ಧನದೇಹ ಇತರ ನೋಡಲು ಮೋಹ ಅಧಿಕವಾಗಿ ಪತಿತಪಾವನ ರಂಗ ಗೋಪಾಲವಿಠ್ಠಲನ ಜಿತವಾಗಿ ಭಕುತಿ ಇಟ್ಟು ಮುಕುತಿಯ ಪಡೆಯೆ ಮಾನವ

ಶ್ರೇಷ್ಠ ಜೀವಿ ಆದರೆ ಆತನ ಮನಸ್ಸು ಅದೊಂದು ಗುರಿಯಿಲ್ಲದ ಆಶಾವಸ್ತು ತನ್ಮೂಲಕ ಮಾನವನನ್ನು ಕುಣಿಸುವ ಒಂದು ತುಚ್ಚವಸ್ತು. ಆ ವಸ್ತುವಿಗೆ ಸದಾ ಆಶೆಗಳಿರುತ್ತವೆ ಪ್ರಾಪಂಚಿಕ ಜ್ಞಾನವನ್ನು ಹೊಂದಿದ ಮನುಜನಿಗೆ ಹಲವಾರು ಧನ, ಧಾನ್ಯ, ವಸ್ತು, ವಾಹನ ಐಶ್ವರ್ಯಗಳನ್ನ ನೀಡಿ ಅವನಿಗೆ ಕೇವಲ ತಾತ್ಕಾಲಿಕ ಸುಖವನ್ನು ನೀಡುವಂತೆ ಮಾಡುವ ಆ ಮೂರ್ಖ ಮನಸ್ಸಿಗೆ ದಾಸರು ದಿಕ್ಕಾರವನ್ನು ಹೇಳಿದ್ದಾರೆ. ಸಮಾಜದ ಮದ್ಯೆ ಬದುಕುತ್ತಿರುವ ನಾವುಗಳು ಭಗವಂತನ ನಾಮ ಸ್ಮರಣೆಯಿಂದ ಸಕಲ, ಹಾಗೂ ಶಾಶ್ವತ ನೆಮ್ಮದಿ ಪಡೆದು ಸಾಮಾಜಿಕ ಒಳತಿಗಾಗಿ ಜೀವನ ಸಾಗಿಸಬೇಕೆಂದು ಸಾರಿದ್ದಾರೆ. ಜಗನ್ನಾಥ ದಾಸರು ಜಗನ್ನಾಥದಾಸರು ಗೋಪಾಲದಾಸರ ಶಿಷ್ಯರು, ಜಗನ್ನಾಥ ವಿಠ್ಠಲ ಎಂಬ ಅಂಕಿತದಲ್ಲಿ ಅವರು ಕೀರ್ತನೆ, ಸುಳಾದಿ, ಉಗಾಭೋಗಗಳನ್ನಷ್ಟೆ ಅಲ್ಲದೆ ಹರಿಕಥಾಮೃತಸಾರ ಎಂಬ ಮಧ್ವತತ್ವ ಶಾಸ್ತ್ರ ಗ್ರಂಥವನ್ನು ರಚಿಸಿದರು. ಇವರ ಹುಟ್ಟುರು ರಾಯಚೂರು ಜಿಲ್ಲೆ ಮಾನ್ವಿ ತಾಲೂಕಿನ ಬ್ಯಾಗವಟ, ತಂದೆ ನರಸಿಂಹರಾಯರು, ತಾಯಿ ಲಕ್ಷ್ಮೀಬಾಯಿ. ಇವರ ಜನನ ೧೭೨೮ ರಲ್ಲಾಯಿತು. ಇವರ ಹೆಸರಲ್ಲಿ ಆರನೂರಕ್ಕೂ ಮಿಕ್ಕ ತತ್ವಸುವ್ವಾಲಿಗಳು ಎಂಬ ರಚನೆಗಳು ಕಂಡುಬಂದಿವೆ. ಇವರ ಹುಟ್ಟು ಹೆಸರು ಶ್ರೀನಿವಾಸಾಚಾರ್ಯ. ಫಂಡರಪುರದಲ್ಲಿ ಇವರಿಗೆ ಜಗನ್ನಾಥ ವಿಠಲ ಎಂಬ ಫಲಕ ದೊರೆತ ಬಳಿಕ ಇವರ ಹೆಸರು ಜಗನ್ನಾಥದಾಸ ಎಂದಾಯಿತು.ಆ ಬಳಿಕ ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿದರು. ಭಕ್ತಿಯುತವಾದ ಕೀರ್ತನೆಗಳನ್ನು ಜಗನ್ನಾಥದಾಸರು ತುಂಬಾ ಸುಂದರವಾಗಿ ಹಾಡಿದ್ದಾರೆ. "ನೀ ಕರುಣಿಸದೇ ನಿರಾಕರಿಸಲು ಎನ್ನ ಸಾಕುವರಾರು ದುಯಾಪರ ಮೂರುತಿ" ಭಗವಂತನೇ! ನೀನು ಕರುಣೆತೋರಿ ನನ್ನನ್ನು ಉದ್ಧರಿಸಿದರೆ ಬೇರೆ ಯಾರು ಸಲಹುವವರು? ನೀನು ದಯಾ ಸಮುದ್ರನಾಗಿರುವಿ, ನೀನೇ ನನ್ನನ್ನು ರಕ್ಷಿಸು ಎಂದಾಗಿ ಶ್ರೀಹರಿಯನ್ನು ಕುರಿತು ಇಲ್ಲಿ ಪ್ರಾರ್ಥಿಸಿ ಭಕ್ತಿಯ ಮೌಲ್ಯವನ್ನು ಅಭಿವ್ಯಕ್ತಿಸಿದ್ದಾರೆ. "ಶರಣಾಗತರನು ಪೊರೆವೆನೆಂಬ ತವ ಬಿರುದು ಕಾಯೇ ಕರಿವರದ ಜಗನ್ನಾಥ ವಿಠ್ಠಲಯ್ಯ" ನನ್ನನು ರಕ್ಷಿಸಿ ನೀನು ಶರಣಾಗತರ ರಕ್ಷಕ ಎಂಬ ಬಿರುದನ್ನು ಸಾರ್ಥಕ ಮಾಡು ಸ್ವಾಮಿ!ಹೇ ಗಜೇಂದ್ರವರದನಾದ ಜಗನ್ನಾಥ ವಿಠ್ಠಲನೇ ಮೊಸಳೆಯ ಬಾಯಿಂದ ಗಜೇಂದ್ರನನ್ನು ರಕ್ಷಿಸಿದಂತೆ ಈ ಸಂಸಾರವೆಂಬ ಮೊಸಳೆಯ ಬಾಯಿಂದ ಪಾರುಮಾಡು ಎಂಬುದಾಗಿ ಶ್ರೀ ದಾಸರು ಇಲ್ಲಿ ಭಗವಂತನನ್ನು ಬೇಡಿಕೊಂಡಿದಾರೆ. ಸಾಮಾಜಿಕ ಮೌಲ್ಯವನ್ನು ಸಾರುವ ಹಲವು ಕೀರ್ತನೆಗಳನ್ನು ಜಗನ್ನಾಥದಾಸರು ಉಲ್ಲೇಖೀಸಿದ್ದಾರೆ. "ಇರಬೇಕು ನಿಂದಕರು ಸಜ್ಜನರಿಗೆ ದುರಿತರಾಶಿಗಳ ಪರಿಹರಿಸಲೋಸುಗ ನಿತ್ಯ" ಸಜ್ಜನರಿಗೆ ನಿಂದನೆ ಮಾಡುವವರು ಇರಬೇಕು ಪಾಪರಾಶಿಗಳ ಪರಿಹರಿಸಲು ನಿತ್ಯವುಕಲಿಯುಗದಲ್ಲಿ ತಿಳಿದವರು ಪಾಪ ಕರ್ಮವನ್ನು ಮಾಡಿದರೆ ಬಿಡುವವನ್ಯಾರೆಂದು ಪ್ರಶ್ನಿಸಿ ಸಮಾಜಕ್ಕೆ ಒಳಿತು ಮಾಡುವ ವ್ಯಕ್ತಿಗಳು ಸಮಾಜದ ಮದ್ಯೆದಲ್ಲಿ ಬಂದು ಒಳ್ಳೆಯದನ್ನು ಮಾಡಬೇಕು ಎಂದಿದ್ದಾರೆ. "ಮಲವ ತೊಳೆವಳು ತಾಯಿ ಕೈಗಳಿಂದಲಿ ನಿತ್ಯ ತೊಳೆವ ನಿಂದಕ ತನ್ನ ನಾಲಗೆಯಲಿ ಬಲುಮಿತ್ರನಿವನೆಂದು ತಿಳಿದು ಮನ್ನಿಸಬೇಕು ಹಲವು ಮಹಾಪಾಪಗಳ ಕಳೆದು ಪುಣ್ಯವನೀವು" ಕೊಳೆವ ತೊಳೆವಳು ತಾಯಿ ಕೈಗಳಿಂದ ನಿತ್ಯವು ತೊಳೆವ ನಿಂದಕ ನಾಲಗೆಯಲಿ ಅತಿಯಾದ ಆಪ್ತಗಳೆಯನೀನೆನೆಂದು ತಿಳಿದು ಕ್ಷಮಿಸಬೇಕು. ಹಲವು ಮಹಾಪಾಗಳನ್ನು ಕಳೆದು ಒಳ್ಳೆಯ ನಡತೆಯುಳ್ಳವನಾಗಿ ಮಾಡಬೇಕು ಎಂದಿದ್ದಾರೆ. ಹರಿದಾಸ ಸಾಹಿತ್ಯ ಬೆಳೆದು ಬಂದಂತೆ ತನ್ನದೆ ಆದಂತಹ ಹಲವಾರು ವಿಚಾರ, ವಿಷಯಗಳಿಂದ ಜನರ ಮನೆ ಮತ್ತು ಮನಸ್ಸನ್ನು ತಲುಪಲು ಯತ್ನಸಿ ಯಶಸ್ವಿಯು ಕೂಡಾ ಆಯಿತು. ಇದರಲ್ಲಿ ಬರುವ ಪ್ರಮುಖ ಪುರಂದರದಾಸರು, ಕನಕದಾಸರು, ಗೋಪಾಲದಾಸರು, ಜಗನ್ನಾಥದಾಸರ ಆಯ್ದು ಕೆಲವು ಕೀರ್ತನೆಗಳಿಂದ ಭಕ್ತಿಯ ಮೌಲ್ಯ ಹಾಗೂ ಸಾಮಾಜಿಕ ಮೌಲ್ಯಗಳನ್ನು ಜನರಿಗೆ ತಲುಪಿಸುವ ಮಹತ್ವ ಪೂರ್ಣ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಇದರಿಂದ ಕಂಡುಬರುವ ಶೈಕ್ಷಣಿಕ ವಿಚಾರಗಳಿಂದ ಜನರನ್ನು ಮೌಢ್ಯತೆಯಿಂದ ಹೊರತೆಂದು ಸುಂದರ ಸಮಾಜವನ್ನು ಕಟ್ಟಲು ಹಾತೊರೆದಿದ್ದಾರೆ ಎಂದರೆ ತಪ್ಪಾಗಲಾರದು.

**ಪರಾಮರ್ಶನ ಗ್ರಂಥಗಳು**

೧. 'ಕರ್ನಾಟಕ ಭಕ್ತಿವಿಜಯ' –ಬೇಲೂರು ಕೇಶವದಾಸರು

೨. 'ಪುರಂದರ ಸಾಹಿತ್ಯ ದರ್ಶನ' ಭಾಗ–೧ ಮತ್ತು

೩ –ಪ್ರೊ. ಸಾ.ಕೃ. ರಾಮಚಂದ್ರರಾವ್ ೩. 'ಜಗನ್ನಾಥೆ ದಾಸರ ಕೀರ್ತನೆಗಳು' – ಸಂಪುಟ ೧೪

೪. 'ದಾಸಸಾಹಿತ್ಯ ಮತ್ತು ಸಂಸ್ಕೃತಿ' ಪ್ರೋ.ಸಾ.ಕೃ. ರಾಮಚಂದ್ರರಾವ್